ಉಪಾಧ್ಯಕ್ಷರು :- ಇದು ಉತ್ತಮವಾದ ಸಲಹೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ :- ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಟ್ಯಾಕ್ಸ್ ಇವೇಶನ್ ಬಗ್ಗೆ ಕೇಳಿದ್ದೆ. ಎರಡನೆಯದು ಇವರು ಅವರು ಅರ್ಜಿ ಹಾಕಿದರೆ ನಾವು ಲೈಸನ್ಸ್ ಕೊಡುತ್ತೇವೆ ಎಂದು ಹೇಳುತ್ತಾರೆ. ಅವರು ಅರ್ಜಿ ಹಾಕದೆ ಇರುವುದೇ ಟ್ಯಾಕ್ಸ್ ಇವೇಶನ್ ಮಾಡಲಿಕ್ಕೆ ಅವರಾಗಿ ಅರ್ಜಿ ಹಾಕುವುದಿಲ್ಲ ಅರ್ಜಿ ಹಾಕಿದ ಮೇಲೆ ಟ್ಯಾಕ್ಸ್ ಕಟ್ಟಬೇಕಾಗುತ್ತದೆ, ಕಾನೂನು ಬದ್ಧವಾಗಿ ಕಾರ್ಮಿಕರಿಗೆ ವೇತನ ಕೊಡಬೇಕಾಗುತ್ತದೆ; ಇದಕ್ಕಾಗಿ ಅವರು ಅರ್ಜಿ ಹಾಕುವುದಿಲ್ಲ. ಅವರು ಅರ್ಜಿ ಹಾಕಿದರೆ, ನಾವು ಅನುಮತಿಯನ್ನು ಕೊಡುತ್ತೇವೆ, ಲೈಸನ್ಸ್ ಕೊಡುತ್ತೇವೆ ಎಂದು ಹೇಳತಕ್ಕಂತಹದ್ದು ಸರಿಯಲ್ಲ. ಇವರೇ ಸರ್ವೇ ಮಾಡಿ, ಯಾರ್ಯಾರು ನಡೆಸುತ್ತಿದ್ದಾರೆ ಕಂಪನಿ ಆಕ್ಟ್ ಪ್ರಕಾರ ಇಂಡಸ್ಟ್ರೀಸ್ ಆಕ್ಟ್ ಪ್ರಕಾರ ಯಾರ್ಯಾರು ನಡೆಸುತ್ತಿದ್ದಾರೆಂಬುದನ್ನು ಸರ್ವೇ ಮಾಡಿಸಬೇಕು. ಇಲ್ಲಿ ಏನಾಗುತ್ತದೆ ಅಂದರೆ, ಮಹಿಳೆಯರು ಸಾಮಾನ್ಯವಾಗಿ ಏನು ಮಾಡುತ್ತಿದ್ದಾರೆ ಅಂದರೆ ಕಾರ್ಖಾನೆ ಮಾಲೀಕರ ಹತ್ತಿರ ಬಂದು ಪ್ರತಿ ದಿವಸ ಇಷ್ಟು ಸಾವಿರ ಕಡ್ಡಿ, ಅದಕ್ಕೆ ಬೇಕಾದ ಎಲ್ಲಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಿ, ಮನೆಗಳಲ್ಲಿ ಮಾಡಿ, ಅದನ್ನು ಮಾರನೆಯ ದಿವಸ ಕಾರ್ಖಾನೆಗಳಿಗೆ ತಂದು ಕೊಡುತ್ತಾರೆ. ಇವರು ಆ ಮಹಿಳಾ ಕಾರ್ಮಿಕರು ಕಂಪನಿ ಲೆಕ್ಕಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ಮುಖ್ಯವಾಗಿರತಕ್ಕ ಪ್ರಶ್ನೆ. ಇವರುಗಳನ್ನು ಕಂಪನಿ ಲೆಕ್ಕಕ್ಕೆ ತೆಗೆದುಕೊಂಡು ಇದನ್ನು ಸರ್ವೇ ಮಾಡಿಸಿ ಅದನ್ನು ಪತ್ತೆ ಹಚ್ಚಿದರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಎರಡನೆಯದು ಟ್ಯಾಕ್ಸ್ ಇವೇಷನ್ ತಪ್ಪಿಸಬೇಕು. 2682 ಕೋಟಿ ಅಂತರ ರಾಷ್ಟ್ರೀಯ ಮಾರುಕಟ್ಟೆ ಇದೆ. ಈ ಟ್ಯಾಕ್ಸ್ ಇವೇಷನ್ ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಸಿ. ಗುರುನಾಥ್ :- ಮಾನ್ಯ ಸದಸ್ಯರಾದ ಶ್ರೀ ರಾಮರೆಡ್ಡಿಯವರು ಟ್ಯಾಕ್ಸ್‌ಗೆ ಸಂಬಂಧಪಟ್ಟ ಹಾಗೆ ಒಂದು ವಿಷಯ ಹೇಳಿದರು. ಆಗರಬತ್ತಿ ಉದ್ಯಮದಿಂದ ಸರ್ಕಾರಕ್ಕೆ ಇಷ್ಟೆಲ್ಲಾ ಬರಬಹುದು. ಆದರೆ ಅಲ್ಲಿಯ ಕೆಲಸಗಾರರ ಪರವಾಗಿ ಇಷ್ಟು ಟ್ಯಾಕ್ಸ್ ಬಂತು ಎನ್ನುವುದು ಸುಳ್ಳು ಇರಬಹುದು. ಟಿಕ್ಕಿಕ್ ಬೇರೆ ಆಗಿರಬಹುದು. ಅದನ್ನು ಎಕ್ಸ್‌ಪೋರ್ಟ್ ಮಾಡುವುದರಿಂದ ನಮ್ಮ ಸರ್ಕಾರಕ್ಕೆ ಬರತಕ್ಕ ಆದಾಯ ಹೆಚ್ಚು ಇರಬಹುದು. ಆದರ ಅಂಕಿ ಸಂಖ್ಯೆಗೂ ಅಲ್ಲಿರತಕ್ಕ ದುಡ್ಡಿಗೂ ಯಾವುದೇ ಸಂಬಂಧ ಇಲ್ಲದೇ ಇರಬಹುದೆಂಬುದು ನನ್ನ ಅನಿಸಿಕೆ. ಮಾನ್ಯ ಮುನಿಯಪ್ಪನವರು ಹೇಳಿದಂತಹ ಸಲಹೆ ಏನು ಈಗಾಗಲೇ ಸರ್ಕಾರ ಇವರ ಪರವಾಗಿ ವೆಲ್‌ಫೇರ್ ಬೋರ್ಡ್ ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿ ನಾವು ಎಲ್ಲಾ ಕಡೆ ಸರ್ವೇ ಮಾಡುತ್ತಿದ್ದೇವೆ. ಸರ್ವೇ ಮಾಡಿದ ನಂತರ ಅವರಿಗೆ ಆಗತಕ್ಕ ಯಾವುದೇ ಅನಾರೋಗ್ಯ ಇದೆ, ಅವರಿಗೆ ಕೊಡಬೇಕಾದ ಸವಲತ್ತು ಇದೆ, ಕಾಯಿದೆ ಬದ್ಧವಾಗಿ ಕೊಡಬೇಕಾದ ಕನಿಷ್ಠ ವೇತನ ಏನು ಇದೆ, ಅದನ್ನು ಸರ್ಕಾರದ ವತಿಯಿಂದ ಅವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ವಿಷಯ:- ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘಗಳ ಕುರಿತು.

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 404 (2963)

ಶ್ರೀ. ಜಿ. ಚಂದ್ರಣ್ಣ (ದೇವನಹಳ್ಳಿ) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರತಕ್ಕ ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರ್ಕೆಟ್ಟು ಸಹಕಾರ ಸಂಘಗಳು ಎಷ್ಟು ;

ಆ) ಎಷ್ಟು ಸಂಘಗಳು ಲಾಭದಲ್ಲಿ ಇವೆ ;

ಇ) ನಷ್ಟದಲ್ಲಿ ಇರುವ ಸಂಘಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಈ) ದೇವನಹಳ್ಳಿ ತಾಲ್ಲೂಕಿನ ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘದ 1992-93, 1993-94, 1994-95, 1995-96 ನೇ ಸಾಲಿನ ಲಾಭ : ನಷ್ಟದ ಪೂರ್ಣ ವಿವರವನ್ನು ಒದಗಿಸುವುದು?

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) :-

ಅ) 180

ಆ) 105

ಇ) ನಷ್ಟದಲ್ಲಿರುವ ಸಂಘಗಳನ್ನು ಪುನಶ್ಚೇತನಗೊಳಿಸಲು 1995-96 ನೇ ಸಾಲಿನಲ್ಲಿ 38 ಟಿ.ಎ.ಪಿ.ಸಿ.ಎಂ.ಎಸ್ ಗಳನ್ನು ವ್ಯಾಪಾರಾಭಿವೃದ್ಧಿ ಯೋಜನೆ ಅಡಿಯಲ್ಲಿ ಕಾರ್ಯಕ್ರಮ ರೂಪಿಸಲು ವ್ಯವಸ್ಥೆ ಮಾಡಿದೆ. ಅದರಂತೆ 1996-97 ನೇ ಸಾಲಿಗೂ ಸಹ 38 ಟಿ.ಎ.ಪಿ.ಸಿ.ಎಂ.ಎಸ್. ಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಸದರಿ ಯೋಜನೆಗೆ ಪೂರಕ ವಾಗಿ ಟಿ.ಎ.ಪಿ.ಸಿ.ಎಂ.ಎಸ್ ಗಳಿಗೆ ಎನ್.ಸಿ.ಡಿ.ಸಿ. ಯೋಜನೆಯಡಿಯಲ್ಲಿ ಪಾಲು ಬಂಡವಾಳ ಮತ್ತು ಅನುದಾನವನ್ನು ಸಹಾಯ ಧನ ರೂಪದಲ್ಲಿ ಡಿ.ಸಿ.ಸಿ. ಬ್ಯಾಂಕಿನಿಂದ ಪಡೆಯುವ ನಗದು ಪತ್ತಿನ ಸಾಲದ ಮೇಲೆ ಪಾವತಿಸುವ ಬಡ್ಡಿಯ ಶೇ. 40 ರಷ್ಟನ್ನು ಮಂಜೂರು ಮಾಡಲಾಗುತ್ತದೆ.

ಈ) ದೇವನಹಳ್ಳಿ ಟಿ.ಎ.ಪಿ.ಸಿ.ಎಂ.ಎಸ್.ನ ಲಾಭ ನಷ್ಟಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ಲಾಭ	ನಷ್ಟ
1992-93	ರೂ. 91,497-00	-
1993-94	ರೂ. 36,301-58	-
1994-95	ರೂ. 2,13, 335-46	-

1995-96- ಸಹಕಾರಿ ವರ್ಷ ಮುಗಿದಿಲ್ಲದ ಪ್ರಯುಕ್ತ ಮಾಹಿತಿ ಲಭ್ಯವಿರುವುದಿಲ್ಲ. ಆದರೂ ಸಹ ಆಗಸ್ಟ್ 1995 ರವರೆಗೆ ರೂ. 1,09,00-00 ಗಳ ಲಾಭ ಗಳಿಸಿದೆ (ತಾತ್ಕಾಲಿಕ).

11.50 ಎ. ಎಂ

ಶ್ರೀ ಜಿ. ಚಂದ್ರಣ್ಣ :- ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿರತಕ್ಕ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು 180 ಎಂದು ಹೇಳಿದ್ದಾರೆ. ಆದರೆ ಇಲ್ಲಿ ಲಾಭ ಗಳಿಸಿರುವಂತಹ ಸೊಸೈಟಿಗಳು 105 ಎಂದು ಹೇಳಿದ್ದಾರೆ. ಮತ್ತೆ 75 ಮಾರ್ಕೆಟಿಂಗ್ ಸೊಸೈಟಿಗಳು ನಷ್ಟದಲ್ಲಿವೆಯೆಂದು ಹೇಳಿದ್ದಾರೆ. ಇವತ್ತು ಏನು 38 ಸೊಸೈಟಿಗಳು 1995-96 ನೇ ಸಾಲಿನಲ್ಲಿ ಮತ್ತು 1996-97 ನೇ ಸಾಲಿನಲ್ಲಿ ನಾವು ಅನುದಾನವನ್ನು ಕೊಟ್ಟು ಡಿಸಿಸಿ ಬ್ಯಾಂಕಿನಿಂದ ಶೇಕಡ 40 ಭಾಗವನ್ನು ಪಾವತಿ ಮಾಡಿ ಬಡ್ಡಿ ಮುಖಾಂತರ ಕೊಡುತ್ತೇವೆಂದು ತಾವೇನು ಹೇಳಿದ್ದೀರಿ ಅದನ್ನು ಕೊಟ್ಟರೂ ಸಹಿತ ಏಕೆ ಈ ಸೊಸೈಟಿಗಳು ನಷ್ಟದಲ್ಲಿವೆಯೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ :- (ಸಹಕಾರ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಕೇಳಿದಂತೆ ಅಷ್ಟೊಂದು ಸಹಾಯ ನಾವು ಕೊಟ್ಟರೂ ಕೂಡ ಈ 105 ಸೊಸೈಟಿಗಳು ಸಂಪೂರ್ಣವಾಗಿ ಲಾಭದಲ್ಲಿವೆಯೆಂದು ಅಲ್ಲ ಈ ವರ್ಷ ಸಧ್ಯದಲ್ಲಿ ಲಾಭದಲ್ಲಿವೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದಹಾಗೆ ನಷ್ಟದಲ್ಲಿರುವುದನ್ನು ನಾವು ಪ್ರಾಮಾಣಿಕವಾಗಿ ಒಪ್ಪಬೇಕಾಗುತ್ತದೆ. ನಾವು ಈಗ ಸರ್ಕಾರದಿಂದ ಸವಲತ್ತು ಕೊಟ್ಟರೂ ಕೂಡ ಅಲ್ಲಿ ಮ್ಯಾನೇಜ್‌ಮೆಂಟ್ ದೋಷವಿರಬಹುದು ಏನೇ ಇರಬಹುದು ಬಹಳ ತೊಂದರೆದಾಯಕ ಸ್ಥಿತಿಯಲ್ಲಿದೆ, ಆ ದೃಷ್ಟಿಯಿಂದ ನಾವು ಈಗ ಒಂದು ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಹಾಕಿಕೊಂಡು ಎಲ್ಲಾ ಸಹಕಾರ ಸಂಘಗಳನ್ನು ಹಂತ ಹಂತವಾಗಿ ಈ ವರ್ಷ ಪ್ರತಿ ಜಿಲ್ಲೆಗೆ ಎರಡು ತೆಗೆದುಕೊಳ್ಳುತ್ತೇವೆ. ಮುಂದಿನ ವರ್ಷ ನಾಲ್ಕು ತೆಗೆದುಕೊಳ್ಳುತ್ತೇವೆ. ಹೀಗೆ ಎಲ್ಲಾ ಸಹಕಾರ ಸಂಘಗಳನ್ನು ಅಭಿವೃದ್ಧಿ ಮಾಡುವ ಆ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಜಿ. ಚಂದ್ರಣ್ಣ :- ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ದೇವನಹಳ್ಳಿ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಅದರಲ್ಲಿ ಬರೀ ಲಾಭ ಮಾತ್ರ ತೋರಿಸಿದ್ದಾರೆ. ಅಲ್ಲಿ ನಷ್ಟವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಒಂದು ಸ್ಪಷ್ಟವಾದಂತಹ ಉತ್ತರವಿಲ್ಲ. ಈಗ ಆಡಳಿತ ನಡೆಸತಕ್ಕ ಆಡಳಿತ ಮಂಡಳಿಯ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಅದರ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಇವತ್ತು ಅಲ್ಲಿ ಬಹಳಷ್ಟು ಅನಾನುಕೂಲವಿಯೆಂದು ಹೇಳಿ ಜನಗಳು ನನಗೆ ಒತ್ತಾಯ ಮಾಡಿದ್ದಾರೆ. ಏನಿದ್ದರೂ ಲಾಭ ಮಾತ್ರ ತೋರಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಈ ದೇವನಹಳ್ಳಿ ಮಾರ್ಕೆಟಿಂಗ್ ಸೊಸೈಟಿ ಏನಿದೆ ಮಾನ್ಯ ಸದಸ್ಯರು ಹೇಳಿದ ಹಾಗೆ ಮೊದಲು ಹಾನಿಯಲ್ಲಿತ್ತು. ಇವತ್ತು ಅದು ಎಲ್ಲಾ ನಷ್ಟವನ್ನು ಕಳೆದು, ಕಳೆದ ವರ್ಷ 2 ಲಕ್ಷದ 18 ಸಾವಿರ ಲಾಭದಲ್ಲಿದೆ. ಈ ವರ್ಷ ಸುಮಾರು 1 ಲಕ್ಷದ 80 ಸಾವಿರ ಲಾಭ ಬರಬಹುದೆಂದು ಅಂದಾಜು ಮಾಡಿದ್ದೇವೆ. ಇವತ್ತಿನ ಪರಿಸ್ಥಿತಿಯೊಳಗೆ ಅದು ಲಾಭದಲ್ಲಿದೆ.

ಶ್ರೀ ಹೆಚ್. ಶಿವಪ್ಪ :- ನಷ್ಟದಲ್ಲಿರತಕ್ಕ ಸಂಘಗಳು ಅಂದರೆ, ಅಕ್ಕುಮಲೇಟೆಡ್ ಲಾಸಸ್ ಸೇರಿ ನಷ್ಟಯೆಂದು ತಾವು ಏನಾದರೂ ಪರಿಗಣಿಸಿದಿರೋ ಅಥವಾ ಕ್ಯಾಷ್ ಲಾಸ್ ಎಂದು ತಾವು ಪರಿಗಣಿಸಿದಿರೋ ಎಂಬುದರ ಬಗ್ಗೆ ಸಹಕಾರ ಸಚಿವರು ಹೇಳಬೇಕು.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಸದಸ್ಯರು ಹೇಳಿದ ಹಾಗೆ ದೇವನಹಳ್ಳಿಯದು ಒಂದು ಉದಾಹರಣೆ ತೆಗೆದುಕೊಂಡರೆ ಹಿಂದಿನ ಹಾನಿಯೆಲ್ಲಾ ಕಳೆದು ಇವತ್ತು ಲಾಭದಲ್ಲಿದೆ. ಅಂದರೆ ಇವತ್ತಿನ ಪರಿಸ್ಥಿತಿಯೊಳಗೆ ಹಾನಿಯಿಲ್ಲ, ಲಾಭದಲ್ಲಿದೆ.

ಶ್ರೀ ಹೆಚ್. ಶಿವಪ್ಪ :- ಸರ್ವೇ ಸಾಮಾನ್ಯವಾಗಿ ಲಾಭದಲ್ಲಿರತಕ್ಕ ಸೊಸೈಟಿಗಳನ್ನು ಬಿಟ್ಟು 180 ಸೊಸೈಟಿಗಳ ಪೈಕಿ 105 ಲಾಭದಲ್ಲಿವೆ, ಉಳಿದವು ಲುಕ್ಸಾನುದಲ್ಲಿವೆಯೆಂದು ತಾವು ತಿಳಿಸಿದ್ದೀರಿ. ಲುಕ್ಸಾನ್‌ನಲ್ಲಿರತಕ್ಕ ಸಂಘಗಳಿಗೆ ನಾನು ಕೇಳಿದ್ದುದು ಈ ಅಕ್ಯುಮಲೇಟೆಡ್ ಲಾಸಸ್ ಸೇರಿಸಿ ನಷ್ಟಯೆಂದು ತಾವು ಪರಿಗಣಿಸುತ್ತಿರೋ, ಕ್ಯಾಷ್ ಲಾಸ್ ಇದ್ದರೆ ಮಾತ್ರ ನಷ್ಟಯೆಂದು ಪರಿಗಣಿಸುತ್ತೀರೋ?

ಶ್ರೀ ಎಸ್. ಎಸ್. ಪಾಟೀಲ್ :- ಅಕ್ಯುಮಲೇಟೆಡ್ ಲಾಸ್ ಇದ್ದರೂ ಕೂಡ ಅದು ಲಾಸ್ ಎಂದು ಪರಿಗಣಿಸುತ್ತೇವೆ.

ಶ್ರೀ ಕೆ. ಎಸ್. ನಾಗೇಗೌಡ :- ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ತಾಲ್ಲೂಕುಮಟ್ಟದ ಸಹಕಾರ ಸಂಘಗಳ ಲಾಭ ನಷ್ಟದ ಬಗ್ಗೆ ಮಾತನಾಡಿದರು. ಆದರೆ ಆದರ ಹಿನ್ನೆಲೆ, ನೇರವಾಗಿ ಸಂಬಂಧವಿಲ್ಲದಿದ್ದರೂ ಸಹ ತಾವು ಇವತ್ತು ಏನು ಟಿಎಪಿಎಂಎಸ್ ಲಾಸ್ ಪ್ರಾಫಿಟಿಗೆ ಬದಲಾಗಿ ಮೂಲಭೂತವಾಗಿ ನಮ್ಮ ಸರ್ವೀಸಸ್ ಕೋ-ಆಪರೇಟಿವ್ ಸೊಸೈಟಿಗಳು ಬಹಳ ಭದ್ರವಾಗಬೇಕು. 22-23 ಸಾವಿರ ಕೋ-ಆಪರೇಟಿವ್ ಸೊಸೈಟಿಗಳು ನಮ್ಮ ರಾಜ್ಯದಲ್ಲಿವೆ. ಅದರಲ್ಲಿ ಶೇಕಡ 70 ಪರ್ಸೆಂಟ್ ಸೊಸೈಟಿಗಳು ನಷ್ಟದಲ್ಲಿವೆ. ಅದಕ್ಕೆ ಕಾರಣಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ನಮ್ಮ ಕಾಯಿದೆ ದೋಷ ಏನಿದೆ ಅಂದರೆ, ನಾವು ಹಿಂದೆ ಎಲ್ಲಾ ಸಂಘಗಳನ್ನು ಸೇರಿಸಿ 20 ಹಳ್ಳಿಗೆ ಅಮಾಲಿಗೆಮೇಷನ್ ಮಾಡಿದೆವಲ್ಲಾ, ಆಗ 20 ಹಳ್ಳಿ, 30 ಹಳ್ಳಿ, 40 ಹಳ್ಳಿ, 15 ಹಳ್ಳಿಗಳಿಗೆ ಒಂದು ಸೇವಾ ಸಹಕಾರ ಸಂಘ ಮಾಡಿ ಇವತ್ತು ರಸ್ತೆಗಳಿಗೆ ತೊಂದರೆ, ರೈತರು ಹೋಗಿ ಬರುವುದಕ್ಕೆ ತೊಂದರೆ, ಗೊಬ್ಬರ ತೆಗೆದುಕೊಳ್ಳುವುದಕ್ಕೆ ತೊಂದರೆ, ಸಾಲ ತೆಗೆದುಕೊಳ್ಳುವುದಕ್ಕೆ ತೊಂದರೆ ಇವತ್ತು ಅಮಾಗಮೇಷನ್ ಏನು ಮಾಡಿದ್ದಾರೆ ಅದನ್ನು ನೀವು ಹೊಸ ಕಾಯಿದೆ ತೆಗೆದುಕೊಂಡು ಬಂದು ಅಥವಾ ಬೇರೆ ಆಲೋಚನೆ ಮಾಡಿ ಪ್ರತಿ ಗ್ರಾಮ ಪಂಚಾಯಿತಿಗೂ ಒಂದು ಸೇವಾ ಸಹಕಾರ ಸಂಘವನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಎನ್ನತಕ್ಕದನ್ನು ತಾವು ಯೋಚನೆ ಮಾಡುತ್ತೀರಾ ಅದನ್ನು ಪರಿಶೀಲನೆ ಮಾಡುತ್ತಿರೋ?

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದಹಾಗೆ ಈಗಾಗಲೇ ನಾವು ಪ್ರತಿ ಗ್ರಾಮಪಂಚಾಯಿತಿಗೆ ಒಂದು ಸೇವಾ ಸಹಕಾರ ಸಂಘವನ್ನು ಮಾಡುವಂತಹ ನಿರ್ಣಯ ಕೈಕೊಂಡಿದ್ದೇವೆ. ಆ ರೀತಿಯಾಗಿ ಕ್ರಮ ಕೈಗೊಳ್ಳುತ್ತಿದ್ದೇವೆ. ಅವರು ಹೇಳಿದಹಾಗೆ ನೂರಕ್ಕೆ 60 ರಷ್ಟು ಸಹಕಾರ ಸಂಘಗಳು ಹಾನಿಯಲ್ಲಿವೆಯೆಂದು ಹೇಳುತ್ತಿದ್ದಾರೆ. ಅದು ಸತ್ಯವಾದ ಮಾತು. ಅವುಗಳನ್ನು ಕೂಡ ನಾವು ಈಗಾಗಲೇ ವ್ಯಾಪಾರ ಅಭಿವೃದ್ಧಿಯೊಳಗೆ ಹಾಕಿಕೊಂಡು ಈ ವರ್ಷವೇ ಅಂದರೆ ನಾಳೆ ಅಕ್ಟೋಬರ್ 2 ನೇ ತಾರೀಖಿನಿಂದ ಪ್ರತಿ ತಾಲ್ಲೂಕಿಗೆ ಒಂದು ಸಂಘವನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ನಮ್ಮ ಹುಳಗೋಳು ಶಿರಸಿ ತಾಲ್ಲೂಕಿನಲ್ಲಿ ಒಂದು ಸೊಸೈಟಿಯಿದೆ. ಅಲ್ಲಿ ಸಂಪೂರ್ಣವಾಗಿ ಒಬ್ಬ ರೈತ ಅರ್ಜಿ ಕೊಟ್ಟರೆ ಅವನ ಅವಶ್ಯಕತೆಗಳೆಲ್ಲಾ ಅವನ ಹಳ್ಳಿಯ

ಮುಖಾಂತರ ಪೂರೈಕೆಯಾಗಬೇಕು. ಆ ರೀತಿಯಾದ ವ್ಯಾಪಾರ ಅಭಿವೃದ್ಧಿ ಕಾರ್ಯಕ್ರಮ ವನ್ನು ನಾವು ಹಾಕಿಕೊಂಡಿದ್ದೇವೆ. ನಾಳೆ ಅಕ್ಟೋಬರ್ 2 ನೇ ತಾರೀಖಿನಿಂದ ಪ್ರಾರಂಭ ವಾಗುತ್ತದೆ. ತಮ್ಮ ತಾಲ್ಲೂಕಿನಲ್ಲಿ ಒಂದೋ ಎರಡೋ ಸೊಸೈಟಿಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್. ಶಿವಪ್ಪ :- ಶೇಕಡ 60-70 ಪರ್ಸೆಂಟ್ ಸೊಸೈಟಿಗಳು ಲುಕ್ಸಾನು ಆಗಲಿಕ್ಕೆ ಮೂಲಭೂತ ಕಾರಣಗಳನ್ನು ಏನಾದರೂ ಪತ್ತೆಹಚ್ಚಿದ್ದೀರಾ? ಆಡಳಿತಾತ್ಮಕ ಕಾರ ಣದಿಂದ ಇವು ನಷ್ಟದಲ್ಲಿವೆಯೇ ಅಥವಾ ಬೇರೆ ಕಾರಣಗಳಿಂದ ನಷ್ಟದಲ್ಲಿವೆಯೇ? ಇದನ್ನು ಸರಿಪಡಿಸಲಿಕ್ಕೆ ಸರ್ಕಾರದಿಂದ ಸಾಧ್ಯವಾಗುತ್ತದೆಯೆ?

ಶ್ರೀ ಎಸ್. ಎಸ್. ಪಾಟೀಲ್ :- ಹಲವಾರು ಕಾರಣಗಳಿವೆ. ಏನು ಕಾರಣ ಅಂದರೆ ಕೆಲವು ಸಲ ರೈತ ಬಹಳ ತೊಂದರೆಗೆ ಬೀಳುತ್ತಾನೆ. ಬಹಳ ತೊಂದರೆಯಲ್ಲಿದ್ದು ಬರಗಾಲವಿದ್ದು ಆಗ ಸಾಲವನ್ನು ವಾಪಸ್ಸು ಮಾಡುವುದಿಲ್ಲ ಆ ದೃಷ್ಟಿಯಿಂದ ಹಾನಿಯಾಗು ತ್ತದೆ. ಕೆಲವು ಸಲ ಆಡಳಿತ ಮಂಡಳಿಯವರದು ದೋಷವಿದೆ. ಇನ್ನು ಹಲವಾರು ಕಾರಣ ಗಳು ಇರಬಹುದು. ಅವು ಏನೇ ಇದ್ದರೂ ಕೂಡ ಅವುಗಳನ್ನೆಲ್ಲಾ ಸುಧಾರಿಸಿ, ಇವತ್ತು ಆ ಸಂಘಗಳನ್ನು ಮುಂದಿನ 5 ವರ್ಷಗಳ ಯೋಜನೆಯನ್ನು ಹಾಕಿಕೊಂಡು ಪ್ರತಿಯೊಂದು ಸಂಘವೂ ಕೂಡ ನಾನು ಹೇಳಿದಂತೆ ವ್ಯಾಪಾರ ಅಭಿವೃದ್ಧಿಯೊಳಗೆ ಸೇರಿಸಿಕೊಂಡು ಸಂಪೂರ್ಣವಾದ ಅಭಿವೃದ್ಧಿಯನ್ನು ಮಾಡಿ ಪ್ರತಿ ರೈತನಿಗೆ ಅವನ ಗ್ರಾಮದಲ್ಲಿಯೇ ಇವತ್ತು ಅವನಿಗೆ ಎಲ್ಲಾ ತರಹದ ಸವಲತ್ತುಗಳು ಸಿಗಬೇಕೆನ್ನುವ ದೃಷ್ಟಿಯಿಂದ ಆ ರೀತಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಸಿ. ಎಂ. ಉದಾಸಿ :- ಮಾನ್ಯ ಉಪಾಧ್ಯಕ್ಷರೆ, ಅಕ್ಟೋಬರ್ ತಿಂಗಳಿನಲ್ಲಿ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಚುನಾವಣೆಗಳು ನಡೆಯಬೇಕಾಗಿದೆ. ಪ್ರತಿಯೊಂದು ಗ್ರಾಮಪಂಚಾಯಿತಿಗೂ ಒಂದು ಸಹಕಾರ ಸಂಘವನ್ನು ಮಾಡಬೇಕೆಂದು ಇದ್ದರೆ ಅದನ್ನು ಈಗಲೇ ತೀರ್ಮಾನ ಮಾಡದಿದ್ದರೆ, ಚುನಾವಣೆಯಾದ ಮೇಲೆ ಮತ್ತೊಂದು ಸಲ ಅದನ್ನು ಅಮಾಲ್ಗಮೇಷನ್ ಮಾಡಲಿಕ್ಕೆ ಹೊರಟರೆ ಮತ್ತೆ ಸಮಸ್ಯೆಯಾಗುತ್ತದೆ. ಅದಕ್ಕೆ ಎಷ್ಟು ದಿವಸ ದೊಳಗೆ ಮಾಡುತ್ತಾರೆನ್ನುವುದನ್ನು ಸ್ಪಷ್ಟವಾಗಿ ಮಾನ್ಯ ಸಚಿವರು ಹೇಳಬೇಕೆಂದು ನಾನು ಕೇಳ ಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಹಾಗೆ ಸ್ವಲ್ಪ ಸತ್ಯವಾದ ಮಾತು. ಈಗ ನಾವು ಪ್ರತಿ ಪಂಚಾಯತಿಗೆ ಒಂದು ಸೊಸೈಟಿ ಮಾಡಬೇಕೆಂಬ ಒಂದು ತೀರ್ಮಾನ ಮಾಡಿರುವುದರಿಂದ ಕೆಲವು ಕಡೆ ಬಹಳ ಸಂಘ ಗಳೇನೂ ಒಡೆಯುವುದಿಲ್ಲ. ಬಹುಶಃ ಎಲ್ಲಿ ಗ್ರಾಮಪಂಚಾಯಿತಿಗೆ ಸೊಸೈಟಿಗಳಿವೆ ಅಲ್ಲಿ ಚುನಾವಣೆಯನ್ನು ಮಾಡಿಬಿಡುತ್ತೇವೆ. ಯಾವುದೇ ತೊಂದರೆ ಇಲ್ಲ. ಎಲ್ಲಿ ಒಡಿಯಬೇಕೆ ನ್ನುವ ತೀರ್ಮಾನ ಬರುತ್ತದೆ ಅಲ್ಲಿ ಸ್ವಲ್ಪಮಟ್ಟಿಗೆ ಚುನಾವಣೆಯನ್ನು ಮುಂದಕ್ಕೆ ಹಾಕುತ್ತೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಪ್ರತಿ ಪಂಚಾಯಿತಿಗೆ 15-20 ಗ್ರಾಮ ಗಳನ್ನು ಜೊತೆಮಾಡಿ ಒಂದು ಸೊಸೈಟಿ ಮಾಡತಕ್ಕ ಸಂದರ್ಭದಲ್ಲಿ ನೀವು ಚುನಾವಣೆ

ಮಾಡುವುದಕ್ಕೆ ಮುಂಚೆಯೇ ಮಾಡಿದರೆ ಅದು ವ್ಯವಸ್ಥಿತವಾಗಿರುತ್ತದೆ ಹೊರತು, ನೀವು ಚುನಾವಣೆ ಮಾಡಿದ ಮೇಲೆ ಅದು ವ್ಯವಸ್ಥಿತವಾಗುವುದಿಲ್ಲ. ಇಲ್ಲದಿದ್ದರೆ ತಾವು ದಯ ವಿಟ್ಟು ಚುನಾವಣೆಯನ್ನು ಮುಂದೂಡಿ. ಅದಕ್ಕೆ ನಮ್ಮದೇನೂ ಅಡ್ಡಿಯಿಲ್ಲ. ನೀವು ಇದೆಲ್ಲ ಮಾಡಿಕೊಂಡು ಚುನಾವಣೆ ಆಮೇಲೆ ಒಂದೇ ಸಾರಿ ಮಾಡಿದರೆ ಅದಕ್ಕೆ ಒಂದು ಒಳ್ಳೆಯ ರೂಪುರೇಷೆ ಬರುತ್ತದಯೇ ಹೊರತು ಇಲ್ಲದಿದ್ದರೆ ಬರುವುದಿಲ್ಲವೆನ್ನುವ ಮಾತನ್ನು ಹೇಳು ತ್ತೇನೆ ಅದರ ಬಗ್ಗೆ ತಾವು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಸದಸ್ಯರು ಹೇಳಿದಂತಹ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಂಡು ಆ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಉಪಾಧ್ಯಕ್ಷರೆ, ಆಡಳಿತ ಮಂಡಳಿಯವರಿಂದ ಏನಾದರೂ ಅದು ಭೂ ಅಭಿವೃದ್ಧಿ ಬ್ಯಾಂಕ್ ಇರಬಹುದು ಅಥವಾ ಕೃಷಿ ಸಹಕಾರ ಸಂಘ ಇರಬಹುದು ನಷ್ಟವಾಗಿದ್ದರೆ ಅಂತಹ ಆಡಳಿತ ಮಂಡಳಿಯವರನ್ನು ಸೂಪರ್ ಸೀಡ್ ಮಾಡುತ್ತೀರೋ?

ಶ್ರೀ ಎಸ್. ಎಸ್. ಪಾಟೀಲ್ :- ಅಂತಹ ಅವ್ಯವಹಾರ ನಡೆದಂತಹ ಯಾವುದೇ ಸಂಘಗಳು ಇದ್ದರೂ ಕೂಡ ಕಾಯಿದೆಬದ್ಧವಾಗಿ ಅವುಗಳನ್ನು ವಜಾಮಾಡುವ ವ್ಯವಸ್ಥೆ ಮಾಡ ಲಾಗುವುದು.

ಶ್ರೀ ಕೆ. ಎಂ. ಕೃಷ್ಣಮೂರ್ತಿ :- ಆದರೆ ಕಡೂರು ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ 52 ಲಕ್ಷ ರೂಪಾಯಿ ನಷ್ಟವಾಗಿದೆಯೆಂದು 64 ಎನ್‌ಕ್ವಾಯರಿಯಾಗಿದೆ. ಆದರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ?

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಈ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಬಗ್ಗೆ ಹೇಳಬೇಕೆಂದರೆ, ಅವುಗಳ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ಸದನಕ್ಕೆ ಕೊಡುವುದಾದರೆ ರಾಜ್ಯದಲ್ಲಿರುವ 177 ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಕೇವಲ 5 ಬ್ಯಾಂಕುಗಳು ಮಾತ್ರ ಲಾಭದಲ್ಲಿವೆ. ಉಳಿದೆಲ್ಲಾ ಬ್ಯಾಂಕುಗಳು ನಷ್ಟದಲ್ಲಿವೆ. ಎಷ್ಟು ನಷ್ಟ ದಲ್ಲಿವೆಯೆಂದು ಹೇಳಿದರೆ, 2 ಕೋಟಿ ವರೆಗೆ ನಷ್ಟದಲ್ಲಿವೆ. ಆಡಳಿತ ಮಂಡಳಿಯವರು ಅವರು ದೋಷದಿಂದ ಮಾಡಿದ್ದರೆ ಖಂಡಿತವಾಗಿಯೂ ಆ ಸಂಘಗಳನ್ನು ವಜಾ ಮಾಡುತ್ತೇವೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ :- ಆಡಳಿತ ಮಂಡಳಿಯವರು ಏನು ಅವ್ಯವಹಾರ ಮಾಡುತ್ತಿದ್ದಾರೆ ಎನ್ನುವುದು ಮಂತ್ರಿಗಳ ಗಮನಕ್ಕೂ ಬಂದಿದೆ. ಬರೀ ಲೆಕ್ಕವನ್ನೇ ನಾವು ನೋಡ ಬಾರದು. ಆಡಳಿತ ಮಂಡಳಿಯವರ ಅವ್ಯವಹಾರ ಎಷ್ಟಾಗಿದೆಯೆಂಬುದು ಗೊತ್ತಿದ್ದರೂ ಕೂಡ ಮಂತ್ರಿಗಳು ಏಕೆ ಕ್ರಮವನ್ನು ತೆಗೆದುಕೊಂಡಿಲ್ಲ?

ಶ್ರೀ ಎಸ್. ಎಸ್. ಪಾಟೀಲ್ :- ಆಡಳಿತ ಮಂಡಳಿಯವರ ಅವ್ಯವಹಾರ ಇದೆ ಎಂದು ನಮಗೆ ಕಂಡುಬಂದರೆ ವಜಾ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೇ, ಈಗ 180 ತಾಲ್ಲೂಕು ಗಳಲ್ಲಿ ಮೂರು ವ್ಯವಸಾಯೋತ್ಪನ್ನ ಸಹಕಾರ ಸಂಘಗಳು ಏನಿವೆ ನಮ್ಮ ರಾಜ್ಯದಲ್ಲಿ, ಇವತ್ತು ಅವು ಯಾವ ವಿಷಯಕ್ಕೆ ನೋಂದಾವಣೆ ಆಗಿದೆ ಆ ಕೆಲಸವನ್ನು ಬಿಟ್ಟು ಸಕ್ಕರೆ ಮಾರುವುದು ಮತ್ತು ಅಕ್ಕಿ ಮಾರುವುದರಲ್ಲಿ ನಿರತವಾಗಿವೆ. ಇವತ್ತು ನಮ್ಮ ಪ್ರೊಡ್ಯೂಸ್ ಇಟ್ಟುಕೊಂಡು ಲೋನ್ ಕೊಡಿ ಎಂದರೆ ಬಹಳಷ್ಟು ಸಹಕಾರ ಸಂಘಗಳಲ್ಲಿ ಆ ಲೋನ್ ಕೊಡಲು ಕೂಡ ಅವಕಾಶ ಇಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದು ಯಾವ ವಿಷಯಕ್ಕೆ ನೋಂದಾವಣೆ ಆಗಿದೆ ಆ ಸಹಕಾರ ಸಂಘ, ಅದೇ ರೀತಿ ನಡೆಯು ತ್ತಿದೆಯೇ ಎನ್ನುವುದರ ಬಗ್ಗೆ ಸರ್ಕಾರ ಗಮನಹರಿಸಬೇಕು ಎನ್ನುವುದು ಮೊದಲನೆಯದು. ಎರಡನೆಯದು, ಇವತ್ತು ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಆಕ್ಟ್ ಏನಿದೆ ದೆಹಲಿಯಲ್ಲಿ, ರಾಷ್ಟ್ರ ಮಟ್ಟದಲ್ಲಿ, ಅವರು ಮೂರು ವರ್ಷದ ಒಂದು ಅವಧಿ ಆಗುತ್ತಲೇ ಅವರು ಕೋರ್ಟಿಗೆ ಹೋಗಲಿ, ಮತ್ತೊಂದಕ್ಕೆ ಹೋಗಲಿ, ಶಾಸಕಾಂಗದ ರೀತಿ ಅಲ್ಲಿ ಮರುದಿನವೇ ಚುನಾವಣೆಗಳು ಬರುತ್ತವೆ ಎನ್ನುವಂಥ ಪದ್ಧತಿ ಇದೆ, ಮಲ್ಟಿ ಸ್ಟೇಟ್ ಕೋ-ಆಪರೇಟೀವ್ ಆಕ್ಟ್ ಪ್ರಕಾರ. ಆದರೆ ನಮ್ಮಲ್ಲಿ ಅನೇಕ ಕಾಲದಿಂದ ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡು ಚುನಾವಣೆ ನಡೆಸುವುದಿಲ್ಲ. ಇವತ್ತು ನಾನು ಮಾರ್ಕೆಟಿಂಗ್ ಫೆಡರೇಷನ್ನಿನ ಡೈರೆಕ್ಟರ್ ಆಗಿ ದ್ದೇನೆ. ಸುಮಾರು 7 ವರ್ಷ, 9 ವರ್ಷ ಆಗಿದ್ದೇನೆ, ಇವತ್ತಿಗೂ ಕಾರಣಾಂತರಗಳಿಂದ ಚುನಾ ವಣೆ ನಡೆದಿಲ್ಲ, ಯಾವುದೇ ಇರಬಹುದು. ಲ್ಯಾಂಡ್ ಬ್ಯಾಂಕ್‌ನಲ್ಲೂ ಕೂಡ ಚುನಾವಣೆ ಯಾಗಿ 10 ವರ್ಷ, 11 ವರ್ಷ ಆಗಿದೆ. ಇದರ ಬಗ್ಗೆ ಸರ್ಕಾರ ಗಮನಹರಿಸಿ ಕೋರ್ಟ್ ಮೂಲಕ ಇರತಕ್ಕ ಇಂಥದ್ದನ್ನು ತೆಗೆಸಿ ಅದಕ್ಕೆ ಒಂದು ಅಮೆಂಡ್‌ಮೆಂಟ್ ತರಬೇಕು. ಯಾವುದೇ ಸಹಕಾರ ಸಂಘದ ಆಡಳಿತ ಮಂಡಳಿಗೆ ಮೂರು ವರ್ಷ ಆದಮೇಲೆ, ಮೂರು ವರ್ಷ ಗಳ ನಂತರ ಒಂದು ದಿನದೊಳಗಾಗಿ ಮತ್ತೆ ಸಹಕಾರ ಸಂಘಗಳ ಚುನಾವಣೆ ನಡೆಯ ಬೇಕು. ಅದನ್ನು ಕಟ್ಟು ನಿಟ್ಟಾಗಿ ತರಬೇಕು ಎಂದು ಹೇಳುತ್ತೇನೆ. ಮತ್ತು ನಮ್ಮ ಸಹಕಾರ ಸಂಘದ ಆಕ್ಟ್‌ನಲ್ಲಿ ಇರತಕ್ಕಂಥ ಸೆಕ್ಷನ್ 121 ನ್ನು ದಯವಿಟ್ಟು ತೆಗೆಯಬೇಕು. ಹಿಂದೆ ನಮ್ಮ ಕೆ. ಹೆಚ್. ಪಾಟೀಲರು ಬಹಳ ಒಳ್ಳೆಯ ಸಹಕಾರ ಮಂತ್ರಿಗಳು ಇದ್ದಾಗಲೂ ಕೂಡ ಇದನ್ನು ನಾವು ತೆಗೆಯುತ್ತೇವೆ ಎಂದು ಹೇಳುತ್ತಲೇ ಬಂದಿದ್ದಾರೆ. ಸೆಕ್ಷನ್ 121 ಎನ್ನುವ ಈ ಪೀಡೆಯನ್ನು ತೆಗೆಯಬೇಕು. ಏಕೆಂದರೆ 1992 ರಲ್ಲಿ ನಮ್ಮ ಕೋಲಾರ ಜಿಲ್ಲೆಯ ಟಿ.ಎ.ಪಿ.ಸಿ.ಎಂ.ಎಸ್ ಎಲೆಕ್ಷನ್ ಎಲ್ಲಾ ಮುಗಿದಿದೆ. ಇವತ್ತು ಸ್ಕ್ರೂಟಿನಿ ದಿವಸ ಬಂದು ಸೆಕ್ಷನ್ 121 ರ ಮೇಲೆ ನಮ್ಮ ಚುನಾವಣೆಯನ್ನು ಮುಂದೂಡುತ್ತಾರೆ. ಇದು ನ್ಯಾಯವಾದು ದಲ್ಲ. ಸೆಕ್ಷನ್ 121 ನ್ನು ದುರ್ಬಳಕೆಗೆ ಬಳಸುತ್ತಿದ್ದಾರೆ. ಮಾನ್ಯ ಸಹಕಾರ ಸಚಿವರು ಇದರ ಮೇಲೆ ಒಂದು ಅಮೆಂಡ್‌ಮೆಂಟ್ ತಂದು ಸೆಕ್ಷನ್ 121 ನ್ನು ತೆಗೆಯಬೇಕು ಎಂದು ನಾನು ಅವರಲ್ಲಿ ಕೇಳುತ್ತೇನೆ. ಈ ಮೂರಕ್ಕೂ ಉತ್ತರ ಕೊಡಬೇಕು ಎಂದು ತಮ್ಮನ್ನು ಕೇಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ಮಾರಾಟ ಸಂಘಗಳು ಇವತ್ತು ಯಾವ ಉದ್ದೇಶಕ್ಕಾಗಿ ಹುಟ್ಟಿವೆಯೋ, ಆ ಉದ್ದೇಶವನ್ನು ಸರಿಯಾಗಿ ಸಹಕಾರ ಸಂಘಗಳು ಮಾಡುತ್ತಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಆ ಒಂದು ದೃಷ್ಟಿಯಲ್ಲಿ ಇವತ್ತು ವ್ಯಾಪಾರ 'ಅಭಿವೃದ್ಧಿ ಮಾಡಬೇಕೆಂದು ಈ ಯೋಜನೆಯಲ್ಲಿ ತಂದು ಪ್ರತಿ ಜಿಲ್ಲೆಗೆ ಎರಡು ಮಾರಾಟ ಸಹಕಾರ ಸಂಘಗಳನ್ನು ತೆಗೆದುಕೊಂಡು, ಅವರು ಹೇಳಿದ ಹಾಗೆ ಉದ್ದೇಶ ಈಡೇರುವ ಹಾಗೆ ಆ ರೀತಿಯಾಗಿ ಅಭಿವೃದ್ಧಿ ಪಡಿಸಲಿಕ್ಕಾಗಿ ಇದೇ

ಅಕ್ಟೋಬರ್ 2 ರಿಂದ ಕಾರ್ಯಕ್ರಮಗಳನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಇದಕ್ಕೆ ತಾವು ದಯವಿಟ್ಟು ಸಮಾಧಾನ ಪಡುತ್ತೀರಿ ಎಂದು ಅನ್ನಿಸುತ್ತದೆ. ಆ ಮೇಲೆ 121 ನೇ ಕಲಮಿನ ಪ್ರಕಾರ, ಸಹಕಾರ ಸಂಘಗಳು ಆ ಕಲಮನ್ನು ಹೇಗೆಬೇಕಾದರೂ ಉಪಯೋಗಿಸುತ್ತಾರೆ ಅನ್ನುವ ಮಾತನ್ನು ಹೇಳಿದ್ದಾರೆ. ಆ ಕಲಮನ್ನು ತೆಗೆಯಬೇಕು ಎಂದು ಹೇಳಿದ್ದಾರೆ. ಆದರೆ ಆ ಕಲಮಿನ ಬಗ್ಗೆ, ಹೈಕೋರ್ಟಿನಲ್ಲೂ ಕೂಡ ಆ ಕಲಮು ತಪ್ಪು ಅಲ್ಲ ಎಂದು ಆಗಿದೆ. ಆದರೆ ಅದು ದುರ್ಬಳಕೆ ಆಗುತ್ತದೆ ಅನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ. ಸಮಗ್ರವಾಗಿ ಕಾಯಿದೆಗೆ ತಿದ್ದುಪಡಿ ತಂದಾಗ ಅದನ್ನು ಕೂಡ ನಾವು ಮಾಡುತ್ತೇವೆ ಅನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅವರು ಇನ್ನೊಂದು ಬಹಳ ಮಹತ್ವದ ಪ್ರಶ್ನೆ ಕೇಳಿದರು. ಬಹುಶಃ ಅವರಿಗೆ ಗೊತ್ತಿದೆ. ಇದನ್ನು ಸದನದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕೆಲವು ಆಡಳಿತ ಮಂಡಳಿಯವರು ಏನು ಮಾಡುತ್ತಾರೆ ಎಂದರೆ ತಾವೇ ಮೊದಲು ತಪ್ಪು ಮಾಡುತ್ತಾರೆ. ತಾವೇ ಕೋರ್ಟಿಗೆ ಹೋಗಿ ಸ್ಟೇ ತಂದು ಬಿಡುತ್ತಾರೆ. ಇದು ನಡೆದಂಥ ವ್ಯವಸ್ಥೆ. ಸುಮಾರು ಬಹಳ ಸಂಘಗಳು ಇದರಲ್ಲಿ ಇವೆ. ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಹೇಳಿ, ಹೈಕೋರ್ಟಿನಲ್ಲಿ ಎಷ್ಟು ಕೇಸುಗಳು ಇವೆ ಎಂದು ತಿಳಿದುಕೊಂಡು, ನಮ್ಮ ಅಡ್ವೊಕೇಟ್ ಜನರಲ್‌ಗೆ ಹೇಳಿ ಅವನ್ನೆಲ್ಲಾ ತೆರವು ಮಾಡುವಂಥ ಪ್ರಯತ್ನ ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ ಎನ್ನುವಂಥ ಮಾತನ್ನು ಕೂಡ ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಹಿರಿಯ ಸದಸ್ಯರಾಗಿರುವಂಥ ಉದಾಸಿಯವರು ಬಹಳ ಚೆನ್ನಾಗಿ ಕೇಳಿದರು. ಈಗ ಉದಾಹರಣೆಗೆ ಹೇಳುವುದಾದರೆ ಕೆ. ಹೆಚ್. ಪಾಟೀಲ್‌ರವರು ಇವತ್ತು ನಮ್ಮ ಮುಂದೆ ಇಲ್ಲ. ಕೆ. ಹೆಚ್. ಪಾಟೀಲ್ ರವರ ಕಾಲದಲ್ಲಿ ಸಹಕಾರಿ ಮೂಮೆಂಟ್ ರೈತರಿಗೆ ಬಹಳ ಸಹಕಾರಿ ಆಗಿತ್ತು. ಸನ್ಮಾನ್ಯ ಜಾಲಪ್ಪನವರೂ ಇಲ್ಲೇ ಇದ್ದಾರೆ. ಅವರು ಸಹಕಾರ ಸಚಿವರು ಆಗಿದ್ದ ಕಾಲದಲ್ಲೂ ಸಹ ಕೋ-ಆಪರೇಟೀವ್ ಮೂವ್‌ಮೆಂಟ್ ಚೆನ್ನಾಗಿ ಇತ್ತು. ಇತ್ತೀಚೆಗೆ, ಇಡೀ ರಾಜ್ಯದಲ್ಲಿ ಕೋ-ಆಪರೇಟೀವ್ ಮೂವ್‌ಮೆಂಟ್ ಸತ್ತು ಹೋಗಿದೆ ಅಧ್ಯಕ್ಷರೇ, ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ 53 ಸೊಸೈಟಿಗಳು ಇದ್ದವು. ಅದನ್ನು ಅಮಾಲ್ಗಮೇಟ್ ಮಾಡಿ 17 ಸೊಸೈಟಿಗೆ ತಂದರು. ಮಂಡ್ಯ ಜಿಲ್ಲಾ ಚುನಾವಣೆಯಲ್ಲಿ ನಾಲ್ಕೇ ನಾಲ್ಕು ಸೊಸೈಟಿಗಳು ಜೀವಂತವಾಗಿ ಇರತಕ್ಕಂಥವು. ತಾವು ಅರ್ಥಮಾಡಿಕೊಳ್ಳಬೇಕು. ಇವತ್ತಿನವರೆಗೆ ರೈತರಿಗೆ ಬೇಕಾಗಿರತಕ್ಕಂಥ ಉಪ್ಪು, ಗೊಬ್ಬರ, ಗೋಧಿ, ಇವತ್ತು ಎಷ್ಟೋ ನ್ಯಾಯ ಬೆಲೆ ಅಂಗಡಿಗಳಿಂದ ಕೋ-ಆಪರೇಟೀವ್ ಸೊಸೈಟಿ ಮೂಲಕ ನಡೆಯುತ್ತಾ ಇರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ, ಕೋ-ಆಪರೇಟೀವ್ ಸೊಸೈಟಿಯನ್ನು ಒಂದು ಪಂಚಾಯಿತಿಗೆ ಒಂದು ಮಾಡುತ್ತೇವೆ ಎಂದು, ಅದನ್ನು ಸನ್ಮಾನ್ಯ ಸಹಕಾರ ಸಚಿವರು ನಿರ್ದಿಷ್ಟವಾಗಿ ಹೇಳಬೇಕು. ಏಕೆಂದರೆ, ಅಕ್ಟೋಬರ್‌ನಲ್ಲಿ ಚುನಾವಣೆ ಮಾಡಬೇಕು ಎನ್ನುವ ಸಂದರ್ಭದಲ್ಲಿ ನೀವು ಸಮೀಕ್ಷೆ ಮಾಡಿ. ನೀವು ಈ ಚುನಾವಣೆಯನ್ನು ಒಂದು 6 ತಿಂಗಳ ಕಾಲ ಮುಂದಕ್ಕೆ ಹಾಕಿ, ಏನೂ ಆಗುವುದಿಲ್ಲ. ಏಕೆಂದರೆ, ನಿನ್ನೆ ನಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದೆವು, ನಮ್ಮ ಮುಖ್ಯ ಮಂತ್ರಿಗಳು ಯಾರ್ಯಾರಿಗೆ ಯಾವ್ಯಾವ ಖಾತೆ ಕೊಡಬೇಕು ಎನ್ನುವುದನ್ನು ನೋಡಿಯೇ ಕೊಟ್ಟಿದ್ದಾರೆ ಎಂದು. ನನಗೆ ಅನ್ನಿಸುತ್ತಿದೆ, ಕೋ-ಆಪರೇಟೀವ್ ಮೂವ್‌ಮೆಂಟ್ ಹಿಂದೆ

ಜಾಲಪ್ಪನವರ ಕಾಲದಲ್ಲಿ, ಪಾಟೀಲರ ಕಾಲದಲ್ಲಿ ಏನಿತ್ತೋ ಆ ಮೂವ್‌ಮೆಂಟ್ ನಿಮ್ಮಿಂದ ಆಗಬೇಕು. ದಯವಿಟ್ಟು ಈ ಸದನಕ್ಕೆ ಸ್ಪಷ್ಟ ಉತ್ತರ ಕೊಡಿ. ನೀವು ಚುನಾವಣೆಯನ್ನು ಮುಂದೂಡಿ. ಅದನ್ನೆಲ್ಲಾ ಸಮೀಕ್ಷೆ ಮಾಡಿ. ಪ್ರತಿಯೊಂದು ಗ್ರಾಮ ಪಂಚಾಯಿತಿಗೂ, ಪ್ರಕಾಶ್ ರವರ ಗ್ರಾಮಪಂಚಾಯಿತಿ ಏನಿದೆಯೋ, ಆ ಪ್ರತಿ ಪಂಚಾಯಿತಿಗೂ ಒಂದೊಂದು ಸಹ ಕಾರ ಸಂಘಗಳನ್ನು ಸದ್ಯದಲ್ಲೇ ಮಾಡುತ್ತೇವೆ ಎಂದು ದಯವಿಟ್ಟು ಹೇಳಿ. ನೀವು ಅಡ್ಡ ಗೋಡೆ ಮೇಲೆ ದೀಪ ಇಟ್ಟಹಾಗೆ ಆಗ ಮಾಡುತ್ತೇವೆ, ಈಗ ಮಾಡುತ್ತೇವೆ ಎಂದು ಹೇಳುವುದು ಬೇಡ. ದಯವಿಟ್ಟು ಸ್ಪಷ್ಟ ಮಾಡಿ.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ಕೆ. ಹೆಚ್. ಪಾಟೀಲರ ಕಾಲದಲ್ಲಿ ಬಹಳ ಚೆನ್ನಾಗಿ ಇತ್ತು, ಇವತ್ತು ತುಂಬಾ ಕೆಟ್ಟಿದೆ ಎಂದು ಹೇಳಿದ್ದಾರೆ. ಇದು ಕೆಡುವುದಕ್ಕೆ ಪ್ರಾರಂಭಮಾಡೇ 25-30 ವರ್ಷ ಆಯಿತು. ಆದೇ ಕೆ. ಹೆಚ್. ಪಾಟೀಲರೇ ನಮ್ಮ ಧಾರವಾಡದ್ದು ಅಮಾಲ್‌ಗಮೇಷನ್ ಮಾಡಿದ್ದುದು ಆಯಾ ಕಾಲಕ್ಕೆ ತಕ್ಕ ಹಾಗೆ ಮಾಡಿದ್ದಾರೆ. ಆದರೆ ದುರ್ದೈವದಿಂದ ಇವುಗಳಲ್ಲಿ ರಾಜಕೀಯ ಮಾಡಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ನಾನು ಮಾತ್ರ ರಾಜಕೀಯ ಮಾಡುವುದಿಲ್ಲ. ಇವುಗಳಲ್ಲಿ ಕಾಂಗ್ರಸ್ ದಳ ತರುವುದಿಲ್ಲ. ಪ್ರತಿ ಪಂಚಾಯಿತಿಗೆ ಒಂದು ಸೊಸೈಟಿ ಮಾಡುವಂಥ ತೀರ್ಮಾನವನ್ನು ಮಾಡಿದ್ದೇವೆ. ಅದೇ ವಿಷಯವನ್ನು ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದೀರಿ. ಇದು ನಾನು ಒಬ್ಬನು ಹೇಳತಕ್ಕಂಥ ಮಾತು ಅಲ್ಲ. ಅದು ನಮ್ಮ ಮಂತ್ರಿ ಮಂಡಲದ ತೀರ್ಮಾನ ಆಗಬೇಕಾಗುತ್ತದೆ. ಮಂತ್ರಿಮಂಡಲದಲ್ಲಿ ಇಟ್ಟು ತೀರ್ವದಲ್ಲಿಯೇ ಅದನ್ನು ತೀರ್ಮಾನ ತೆಗೆದುಕೊಂಡು ತಮಗೆ ಹೇಳುತ್ತೇನೆ ಎನ್ನುವ ಮಾತನ್ನು ಕೂಡ ಈ ಸಭೆಗೆ ಹೇಳುತ್ತೇನೆ.

ಶ್ರೀ ಎಚ್. ಶಿವಪ್ಪ :- ಈ ಸ್ನೇಹಿತರಾದ ಶ್ರೀನಿವಾಸಗೌಡರು ಹೇಳಿದ ಹಾಗೆ ಸೆಕ್ಷನ್ 121 ದುರ್ಬಳಕೆಯಾಗುತ್ತಿದೆ. ಅದನ್ನು ತಿದ್ದುಪಡಿ ಮಾಡಬೇಕು ಎಂದು ಹೇಳಿದರೆ, ನಮ್ಮ ಹೈಕೋರ್ಟ್ ವ್ಯಾಲಿಡ್ ಎಂದು ಹೋಲ್ಡ್ ಮಾಡಿದೆ. ಆದ್ದರಿಂದ ಕಾನ್ಸ್‌ಟಿಟ್ಯೂಷನಲ್ಲಿ ವ್ಯಾಲಿಡ್ ಎಂದು ಹೋಲ್ಡ್ ಮಾಡಿದೆ. ಆದ್ದರಿಂದ ಅದನ್ನು ತೆಗೆಯುವುದು ಕಷ್ಟವಾಗುತ್ತದೆ, ಅದರ ಬಗ್ಗೆ ಯೋಚನೆ ಮಾಡಬೇಕು, it should not be used as a political weapon ಎಂದು ತಾವು ತಿಳಿಸಿದಿರಿ. ಅದೇ ಪ್ರಕಾರ ಅವರ ಮನಸ್ಸಿಗೆ ಬಂದಂತೆ 30-ಬಿ ಡೈರೆಕ್ಷನ್ಸ್ ಕೊಡುತ್ತಾರೆ. ಯಾವುದೇ ಒಂದು ಕೆಲಸ ಮಾಡಬೇಕು ಎಂದರೂ 30-ಬಿ ಡೈರೆಕ್ಷನ್ಸ್ ಕೊಟ್ಟು ಬಿಟ್ಟರೆ if that is dis-obeyed, Section 30 or Section 30(a) will be applied ಎನ್ನುವ ಒಂದು ಕಾನೂನು ಇದೆ. ಕೆ. ಹೆಚ್. ಪಾಟೀಲ್ ರವರು ಇದ್ದಾಗ ಅನೇಕ 30-ಬಿ ಡೈರೆಕ್ಷನ್‌ಗಳನ್ನು ವಿತ್‌ಡ್ರಾ ಮಾಡಿಕೊಂಡರು. ಆ ಪ್ರಕಾರ ಅದನ್ನು ತಾವು ಮಾಡುತ್ತೀರೋ? ಅದರ ಬಗ್ಗೆ ಗಮನಹರಿದಿದೆಯೇ, ಅದು ಸಿಂಧು ಎಂದು ತಾವು ತಿಳಿದುಕೊಳ್ಳುತ್ತೀರಾ? Illegal section 30(b) directions have been issued. So, will you kindly see that such illegal directions are going to be stopped by withdrawing that section.

ಶ್ರೀ ಎಸ್. ಎಸ್. ಪಾಟೀಲ್ :- ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ನಮ್ಮ ಸರ್ಕಾರ ಬಂದ ಮೇಲೆ ಒಂದೂ ಇಂಥ ಕೆಲಸ ಮಾಡಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ.

ಏಕೆಂದರೆ ನಾನು ಇಷ್ಟು ದಿವಸ ಕೆಳಗೆ ಕುಳಿತು ಮೇಲೆ ಬಂದವನು. ನನಗೆ ಅರಿವು ಇದೆ. ಸಹಕಾರ ಸಂಘಗಳಿಂದ ಹೇಗೆ ತೊಂದರೆ ಆಗುತ್ತದೆ ಎನ್ನುವುದು, ಯಾವ ರೀತಿಯಲ್ಲೂ ತೊಂದರೆ ಆಗದ ರೀತಿಯಲ್ಲಿ 30-ಬಿ ಡೈರೆಕ್ಷನ್ಸ್ ಕೊಡುವಂಥ ಪ್ರಯತ್ನ ಮಾಡುತ್ತೇವೆ, ಅಂಥದ್ದು ಯಾವುದಾದರೂ ತೊಂದರೆ ಆಗುವಂಥ ಡೈರೆಕ್ಷನ್ಸ್ ಆಗಿದ್ದರೆ ತಕ್ಷಣ ಹಿಂದೆ ತೆಗೆದು ಕೊಳ್ಳುತ್ತೇವೆ.

ಡಾ. ಶಂಕರನಾಯಕ್ :- ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿ ಹೆಸರಿಗೆ ತಕ್ಕ ಹಾಗೆ ಸರಿಸಮನಾಗಿ ಅಲ್ಲಿ ಇರತಕ್ಕಂಥ ಕಾರ್ಯದರ್ಶಿಯವರೂ ಕೂಡ ಅದಕ್ಕೆ ಕಾರಣ ಎಂದು ನಾನು ಭಾವಿಸುತ್ತೇನೆ. ನನ್ನ ಕ್ಷೇತ್ರದ ಸಹಕಾರ ಸಂಘಗಳಲ್ಲಿ ಪ್ರತಿವರ್ಷ ಸುಮಾರು 40 ಲಕ್ಷ ರೂಪಾಯಿಯಷ್ಟು ಹಣವನ್ನು ಒಬ್ಬ ಕಾರ್ಯದರ್ಶಿ ಮಿಸ್‌ಯೂಸ್ ಮಾಡಿಬಿಟ್ಟು, ಅಲ್ಲಿ ಇರತಕ್ಕಂಥ ಕಡತಗಳನ್ನು ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಕೋರ್ಟಿನಲ್ಲಿ ಸ್ಟೇ ಮಾಡಿ, ಅಲ್ಲಿ 3 ವರ್ಷಗಳಿಂದ ಸಹಕಾರ ಸಂಘವೂ ನಡೆಯುತ್ತಿಲ್ಲ, ಅಲ್ಲಿ ಜನಗಳಿಂದ ಏನು ಹಣ ವಸೂಲಾಗಿದೆಯೋ ಅದನ್ನೂ ಸಹಕಾರ ಸಂಘಕ್ಕೆ ಕಟ್ಟಿಲ್ಲ. ಇಂಥಹ ಹಲವಾರು ನಿದರ್ಶನಗಳು ಸಹಕಾರ ಸಂಘಗಳು ಕೆಡಲಿಕ್ಕೆ ಕಾರ್ಯದರ್ಶಿಯವರು ಕಾರಣ ಎಂದು ಅನೇಕ ಸಹಕಾರ ಸಂಘಗಳಲ್ಲಿ ಇದೆ. ಆದರೆ ಕಾಯಿದೆ ಪ್ರಕಾರ ಅವರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ, ಅವರಿಂದ ವಸೂಲು ಮಾಡುವುದಾಗಲೀ, ಅವರಿಂದ ಪುಸ್ತಕಗಳ ರಿಕವರಿ ಮಾಡುವುದಾಗಲೀ ಮಾಡತಕ್ಕಂಥ ಕಾಯಿದೆಯನ್ನು ತಿದ್ದುಪಡಿ ತರುತ್ತೀರೋ? ಅವರು ಸಹಕಾರ ಸಂಘಗಳಲ್ಲಿ ಇರತಕ್ಕಂಥ ಹಣವನ್ನೂ ದೋಚಿಕೊಂಡು, ಪುಸ್ತಕಗಳನ್ನೂ ತೆಗೆದು ಕೊಂಡು ಹೋಗಿ ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡು ವರ್ಷಾನುಗಟ್ಟಲೆ ಮಾಡುತ್ತಾರೆ. ಇದಕ್ಕೆ ಮಾನ್ಯ ಸಹಕಾರ ಸಚಿವರು ಏನಾದರೂ ಕ್ರಮ ತೆಗೆದುಕೊಳ್ಳುವರೇ?

ಉಪಾಧ್ಯಕ್ಷರು :- ಸಹಕಾರ ಇಲಾಖೆ ಮೇಲೆ ಜನರಲ್ ಡಿಸ್ಕಷನ್ ಆದ ಹಾಗೆ ಆಯಿತು. ಇನ್ನು ಇದನ್ನು ಅಲೋ ಮಾಡುವುದಿಲ್ಲ. ಈಗ ಚಂದ್ರಪ್ಪನವರು ಕೇಳಲಿ.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಒಂದು ಪ್ರಶ್ನೆಗೆ ಒಂದು ಗಂಟೆ ಆಯಿತು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ :- ತಾವು ಈಗ ಕೊಡತಕ್ಕಂಥ ತೀರ್ಪಿಗೆ ನಾವು ತಲೆ ಬಾಗುತ್ತೇವೆ. ಇದರ ಬಗ್ಗೆ ಸುದೀರ್ಘವಾದ ಚರ್ಚೆಯಾಗಲಿ. ಅರ್ಧಗಂಟೆ ಚರ್ಚೆಗೆ ಎಂದು ಇದೆ.

ಶ್ರೀ ಚಂದ್ರಶೇಖರ ಎಂ. ಮಾಮಾನಿ :- ಸದನದಲ್ಲಿ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಉತ್ತರ ಕೊಡಲು ಹೇಳಿ. ಅಸೆಂಬ್ಲಿಯೂ ನಡೆಯಲಿಲ್ಲ, ಉತ್ತರವನ್ನೂ ಕೊಡುವುದಿಲ್ಲ ಎಂದರೆ ಹೇಗೆ? ಉತ್ತರ ಕೊಡುವುದಕ್ಕೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು :- ಇಲ್ಲಿ ಬರತಕ್ಕಂಥಾದ್ದು, ಈ ಎಷ್ಟು ಜನ ಉಪ ಪ್ರಶ್ನೆ ಕೇಳಿದ್ದೀರಿ.

ಇದು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಮಹತ್ವವಾದಂಥ ಪ್ರಶ್ನೆ ಇರತಕ್ಕಂಥಾದ್ದು, ಆದ್ದರಿಂದಲೇ ನಾನು ಎಲ್ಲಾ ಪ್ರಶ್ನೆಗಳನ್ನೂ ಅಲೋ ಮಾಡಿದ್ದೇನೆ.

ಶ್ರೀ ಚಂದ್ರಶೇಖರ ಎಂ. ಮಾಮನಿ :- ಈಗ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಹೇಳಿ.

ಉಪಾಧ್ಯಕ್ಷರು :- ಒಂದು ನಿಮಿಷ, ಕುಳಿತುಕೊಳ್ಳಿ, ಡಾಕ್ಟರ್ ಪ್ರಶ್ನೆಗೆ ಉತ್ತರ ಕೊಡಿ. ಶಂಕರನಾಯಕ್ ಅವರ ಪ್ರಶ್ನೆಗೆ ಉತ್ತರ ಕೊಡಿ.

ಶ್ರೀ ಎಸ್. ಎಸ್. ಪಾಟೀಲ್ :- ಗೌರವಾನ್ವಿತ ಸದಸ್ಯರು ಕೇಳಿದಹಾಗೆ ಕೆಲವು ಕಡೆ ಕಾರ್ಯದರ್ಶಿಗಳು ಇದೆಲ್ಲಾ ದುಡ್ಡುಗಿಡ್ಡನ್ನು ಬುಕ್ ಸಹಿತ ತೆಗೆದುಕೊಂಡು ಇಟ್ಟು ಕೊಂಡು ಬಿಡುತ್ತಾರೆ. ಅದು ಸಿಗುವುದಿಲ್ಲ. ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಮಾತನ್ನು ಕೇಳಿದ್ದಾರೆ. ಇದು ಸ್ವಲ್ಪ ಕಠಿಣವಾದ ಸಮಸ್ಯೆ. ಇದಕ್ಕೆ ಈಗಾಗಲೇ ನಾವು ಏನೋ ಒಂದು ಕಡಿವಾಣ ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ತಮಗೆ ಹೇಳುವುದಾದರೆ ಈಗಾಗಲೇ ಹಲವಾರು ಅನುಭವಗಳು ನಮ್ಮ ಗಮನಕ್ಕೆ ಬಂದಿವೆ. ಅದಕ್ಕೆಲ್ಲಾ ಕಡಿವಾಣ ಹಾಕುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ವಿಷಯ :- ಚಿತ್ರದುರ್ಗ ಜಿಲ್ಲೆಯಲ್ಲಿ ತಂಪು ಮಳಿಗೆ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 405 (2962)

ಶ್ರೀ ಎಂ. ಚಂದ್ರಪ್ಪ (ಭರಮ ಸಾಗರ) :- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಈರುಳ್ಳಿ ಹಾಗೂ ತರಕಾರಿಗಳನ್ನು ಹೆಚ್ಚಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬೆಳೆದಂತ ಪದಾರ್ಥಗಳನ್ನು ಇಟ್ಟುಕೊಳ್ಳಲು ಸರಿಯಾದ ವ್ಯವಸ್ಥೆ ಇಲ್ಲದೆ ಕೊಳೆತು ಹಾಳಾಗುತ್ತಿರುವುದು ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಕಡೆ ತಂಪು ಮಳಿಗೆ (ಕೊಲ್ಡ್ ಸ್ಟೋರೇಜ್) ನ್ನು ಕಟ್ಟುವ ಉದ್ದೇಶ ಏನಾದರೂ ಇದೆಯೇ?

ಇ) ಇದ್ದರೆ ಅದನ್ನು 1995-96 ನೇ ಸಾಲಿಗೆ ಕಟ್ಟುವ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ಹೌದು

ಆ) ಇದೆ

ಇ) ಚಿತ್ರದುರ್ಗ ಜಿಲ್ಲೆಯೂ ಸೇರಿದಂತೆ ರಾಜ್ಯದಾದ್ಯಂತ ತೋಟಗಾರಿಕೆ ಉತ್ಪನ್ನಗಳಿಗೆ